# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/1982/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 15/12/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ರಾಜಾರಾಂ ಅಡಿಗ ತಂದೆ ಪಿ. ಕೃಷ್ಣ ಅಡಿಗ, ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಳಿ ಪೆರ್ಡೂರು, ಉಡುಪಿ ಜಿಲ್ಲೆರವರು (1) ಶ್ರೀಮತಿ ಪೂರ್ಣಿಮ, ಕಾರ್ಯನಿರ್ವಾಹಣಾಧಿಕಾರಿ, ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ ಹಾಗೂ (2) ಶ್ರೀ ಗಣೇಶ ರಾವ್ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು ಉಡುಪಿ, ಪ್ರಸ್ತುತ ಪರಿವೀಕ್ಷಕರು ಹಿಂದೂ ಧಾರ್ಮಿಕ ದತ್ತಿ ಇಲಾಖೆ ಉಡುಪಿ ಇವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1) ಶ್ರೀ ರಾಜಾರಾಂ ಅಡಿಗ ತಂದೆ ಪಿ. ಕೃಷ್ಣ ಅಡಿಗ, ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಳಿ ಪೆರ್ಡೂರು, ಉಡುಪಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ ಯೋಗೇಶ್ವರ, ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ದತ್ತಿ ಇಲಾಖೆ, ರಜತಾದ್ರಿ ಕಟ್ಟಡ, ಮಣಿಪಾಲ, ಉಡುಪಿ ಜಿಲ್ಲೆ ಮತ್ತು (2) ಶ್ರೀಮತಿ ಪೂರ್ಣಿಮ, ಕಾರ್ಯನಿರ್ವಾಹಣಾಧಿಕಾರಿ, ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ (3) ಶ್ರೀ ದೊಡ್ಡಮನಿ, ಸಹಾಯಕ ಆಯುಕ್ತರು(ಪ್ರಭಾರ), ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ (4) ಶ್ರೀ ಎಸ್.ಸಿ ಕೊಟಾ ರಗಸ್ತಿ ಸಹಾಯಕ ಆಯುಕ್ತರು, ಶ್ರೀ ಅನಂತಪದ್ಮನಾಭ ದೇವಸ್ಥಾನ,

ಪೆರ್ಡೂರು, ಉಡುಪಿ ಜಿಲ್ಲೆ (ಪ್ರಸ್ತುತ ಇ.ಓ. ರೇಣುಕ ಎಲ್ಲಮ್ಮ ದೇವಸ್ಥಾನ ಸೌದತ್ತಿ) (5) ಪ್ರವೀಣ್.ಬಿ. ನಾಯಕ್ ಸಹಾಯಕ ಆಯುಕ್ತರು, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ (ಪ್ರಸ್ತುತ ಡೆಪ್ಯುಟಿ ರಿಜಿಸ್ಟ್ರರ್ ಸಹಕಾರ ಇಲಾಖೆ, ಉಡುಪಿ) (6) ಶೇಷಪ್ಪ ಪೂಜಾರಿ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ,(ನಿವೃತ್ತಿಯಾಗಿರುತ್ತಾರೆ) ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ (7) ಗಣೇಶ್ ರಾವ್, ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ, ಹಾಲಿ ಅಧೀಕ್ಷಕರು, ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಉಡುಪಿ (8)ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿ, ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ, ಹಾಲಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಮಹಲಿಂಗೇಶ್ವರ ಮಹಗಣಪತಿ ದೇವಸ್ಥಾನ ಪಡುಬಿದ್ರೆ ಉಡುಪಿ ತಾಲೂಕು, (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಈ ಕೆಳಕಂಡಂತೆ ದೂರು ಸಲ್ಲಿಸಿರುತ್ತಾರೆ.

2) <u>ದೂರಿನ ಸಾರಾಂಶ:-</u> ದೂರುದಾರರು ಪೆರ್ಡೂರು ಜಿಲ್ಲೆಯ ಖಾಯಂ ನಿವಾಸಿಗಳಿದ್ದು, ವೃತ್ತಿಯಲ್ಲಿ ಅರ್ಚಕರಾಗಿರುತ್ತಾರೆ. ಮಹತೋಭಾರ ಶ್ರೀ ಆನಂತಪ್ಮನಾಭ ದೇವಸ್ಥಾನದಲ್ಲಿ ದೂರುದಾರರು ಸರದಿ ಅರ್ಚಕರಾಗಿರುತ್ತಾರೆ. ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನ ಪ್ರಥಮ ಶ್ರೇಣಿ ದೇವಸ್ಥಾನವಾಗಿರುತ್ತದೆ. ಸದರಿ ದೇವಳದಲ್ಲಿ ಅನುವಂಶಿಕ ಅರ್ಚಕರನ್ನು ಮತ್ತು ಕೀಳು ಶಾಂತಿಯವರನ್ನು ಹೊರತುಪಡಿಸಿ ಇತರರೆಲ್ಲರೂ ಸರ್ಕಾರಿ ನೌಕರರು ಹಾಗೂ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಸುಪರ್ದಿಗೆ ಬರುವ ನೌಕರರಾಗಿರುತ್ತಾರೆ.

a) ದಿನಾಂಕ 24/01/2015 ರಂದು 1ನೇ ಎದುರುದಾರರಿಗೆ ಹಾಗೂ ಅವರ ಮೇಲಾಧಿಕಾರಿಗಳಿಗೂ ಫಿರ್ಯಾದುದಾರರು ಒಂದು ಪತ್ರ ಬರೆದು ದೇವಾಲಯದ ಮರಗಳನ್ನು, ಸ್ಥಿರಾಸ್ತಿಗಳನ್ನು ಕಾಪಾಡುವಂತೆ ಹಾಗೂ ಅದನ್ನು ಕಾಪಾಡುವ ನಿಟ್ಟಿನಲ್ಲಿ ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವಂತೆ ಕೋರಿ ಪತ್ರ ಬರೆದಿರುತ್ತಾರೆ.

b) 1ನೇ ಎದುರುದಾರರು ಅರ್ಜಿಗೆ ಸ್ಪಂದಿಸಿ, ಕಛೇರಿಗೆ ಕರೆಯಿಸಿ, 2ನೇ ಎದುರುದಾರರ ಮೂಲಕ ಸೂಕ್ತ ವ್ಯವಸ್ಥೆ ಕಲ್ಪಿಸುತ್ತೇನೆಂದು ಮೌಖಿಕವಾಗಿ ದೂರುದಾರರಿಗೆ ತಿಳಿಸಿರುತ್ತಾರೆ.

c) ಎದುರುದಾರರು ಅರ್ಜಿಗೆ ಈವರೆಗೂ ಸ್ಪಂದಿಸದೆ. ಕಾನೂನು ಚೌಕಟ್ಟಿನಲ್ಲಿ ವ್ಯವಹರಿಸದೆ, ತೆಪ್ಪಗೆ ಕುಳಿತು, ದೇವಳದ ಆಸ್ತಿ ಪಾಸ್ತಿ ಹಾಳಾಗಲು, ನಷ್ಟವಾಗಲು ಕಾರಣರಾದ ದೇವಳದ ನೌಕರರು, ದೇವಳದ ಆಡಳಿತ ಮಂಡಳಿಯ ಅಧ್ಯಕ್ಷರೊಂದಿಗೆ, ಸದಸ್ಯರೊಂದಿಗೆ ಶಾಮಿಲಾಯಿಸಿರುತ್ತಾರೆ. ಈ ಬಗ್ಗೆ ಮೌಖಿಕವಾಗಿ ಮತ್ತೊಮ್ಮೆ ತಿಳಿಸಿದ್ದರೂ ಕಾನೂನು ಕ್ರಮ ತೆಗೆದು ಕೊಂಡಿರುವುದಿಲ್ಲ. ದೇವಳದ ಸ್ಥಿರಾಸ್ತಿಯನ್ನು ಕಾಪಾಡಲು ಸೂಕ್ತ ಭದ್ರತೆ ಕಲ್ಪಿಸಿರುವುದಿಲ್ಲ. ಕರ್ತವ್ಯ ಲೋಪ ಎಸಗಿರುತ್ತಾರೆ. ಸರ್ಕಾರಕ್ಕೆ ನಷ್ಟ ಉಂಟಾಗಲು ಕಾರಣರಾಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

3) ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

4) 1ನೇ ಎದುರುದಾರರು ಆಕ್ಷೇಪಣೆ:

i. ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು ಶ್ರೀ ದೇವಳದ ಸುಪರ್ದಿಯಲ್ಲಿ ಹಲವು ಮರಮಟ್ಟುಗಳು ಪೋಲಾಗುತ್ತಿದ್ದು, ವ್ಯವಸ್ಥಾಪನಾ ಸಮಿತಿಯ ಸದಸ್ಯರು ಹಾಗೂ ಅಧ್ಯಕ್ಷರು ಬೇಕಾಬಿಟ್ಟಿಯ ಲಾಭಕ್ಕಾಗಿ ಮಾರಿರುವುದು ತಿಳಿದ ಮಾತಾಗಿದ್ದು, ಈ ನಿಟ್ಟಿನಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಹಣಾಧಿಕಾರಿಯವರಿಗೆ ಸೂಕ್ತ ಮಾರ್ಗದರ್ಶನ ನೀಡಿ ದೇವಳದ ಸುಪರ್ದಿಯಲ್ಲಿ ಇರುವ ಎಲ್ಲಾ ಮರದ ದಿಮ್ಮಿಗಳು, ಮರಗಳು, ಹಲಗೆಗಳು, ರೀಪುಗಳು ಇನ್ನಿತರ ತುಂಡುಗಳು ಮುಂತಾದವುಗಳನ್ನು ಲೆಕ್ಕ ತೆಗೆಯುವಂತೆ ಆದೇಶ ಮಾಡಬೇಕಾಗಿ ವಿನಂತಿಸಿಕೊಂಡಿರುತ್ತಾರೆ. ಅಲ್ಲದೆ, ದೇವಳದ ಸುಪರ್ದಿಯಲ್ಲಿ ಇರುವ ಕಾಡು ಮತ್ತು ಇತರೆ ಭೂಮಿಯಲ್ಲಿ ಮರಗಳಿದ್ದರೆ ಅವುಗಳ ಲೆಕ್ಕ ತೆಗೆಯುವಂತೆ ಹಾಗೂ ಮರಗಳ ಹೆಸರು ಬರೆದು ಸ್ಥಿರಾಸ್ತಿ ವಹಿಯಲ್ಲಿ

ದಾಖಲಿಸುವಂತೆ ಆದೇಶ ಮಾಡಬೇಕಾಗಿ ಹಾಗೂ ಹಾಲಿ ಕಾರ್ಯನಿರ್ವಹಣಾಧಿಕಾರಿಯವರಿಗೆ ಸಾರ್ವಜನಿಕರೊಂದಿಗೆ ಹಾಗೂ ಅರ್ಚಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಆದೇಶ ಮಾಡಬೇಕಾಗಿ ದೂರುದಾರರು ಕೋರಿರುತ್ತಾರೆ.

ii. ದೂರುದಾರರ ಹಾಗೂ ಕಾರ್ಯನಿರ್ವಹಣಾಧಿಕಾರಿಯವರ ಸಮಕ್ಷಮ ಪ್ರಕರಣದ ವಿಚಾರಣೆ ನಡೆಸಿ ವಿಚಾರಣೆಗೆ ದೂರುದಾರರ ಕೋರಿಕೆಯಂತೆ ದೇವಸ್ಥಾನದ ಆಸ್ತಿ ರಿಜಿಸ್ಟರ್‌ನ್ನು ಎರಡು ತಿಂಗಳೊಳಗೆ ಎಲ್ಲಾ ಮಾಹಿತಿಯನ್ನು ದಾಖಲಿಸಿ ವರದಿ ಸಲ್ಲಿಸಲು ಕಾರ್ಯನಿರ್ವಹಣಾಧಿಕಾರಿಯವರಿಗೆ ನಿರ್ದೇಶನ ನೀಡಲಾಗಿದೆ.

iii. ಖಡ್ಗಾರಾವಣನ ಗುಡಿಯ ಜೀರ್ಣೋದ್ಧಾರ ಸಂದರ್ಭದಲ್ಲಿ ದೇವಸ್ಥಾನದ ಜಾಗೆಯಲ್ಲಿರುವ ಮರಗಳನ್ನು ಬಳಕೆ ಮಾಡಿಕೊಳ್ಳಲಾಗಿದ್ದು, ಈ ಮರಗಳಲ್ಲಿ ದೇವಸ್ಥಾನಕ್ಕೆ ಉಪಯೋಗಿಸಿಕೊಂಡ ಹಾಗೂ ಉಳಿದ ಮರಗಳ ಅಳತೆಗಳನ್ನು ಮಾಡಿಸಿ ವಿವರಗಳನ್ನು ದಾಖಲಿಸಿ ದೃಢೀಕರಿಸಿರುವುದಾಗಿ ತಿಳಿಸಿರುತ್ತಾರೆ.

5) 2ನೇ ಎದುರುದಾರರ ಆಕ್ಷೇಪಣೆ:-

i. ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನ ಪೆರ್ಡೂರು, ಉಡುಪಿ ಈ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಯಾಗಿ ದಿನಾಂಕ 05/12/2014 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಾನು ಪ್ರಭಾರ ವಹಿಸಿಕೊಳ್ಳುವುದಕ್ಕಿಂತ ಮೊದಲಿಗೆ ದೇವಾಲಯದ ಜೀರ್ಣೋದ್ಧಾರಕ್ಕಾಗಿ ದೇವಾಲಯದ ಜಾಗದಲ್ಲಿರುವ ಮರಗಳನ್ನು ಹಿಂದಿನ ಕಾರ್ಯನಿರ್ವಹಣಾಧಿಕಾರಿ ಹಾಗೂ ಆಡಳಿತ ಮಂಡಳಿಯವರು ಕಡಿದು ಖಡ್ಗರಾವಣನ ಗುಡಿ ನಿರ್ಮಿಸಿರುವುದಾಗಿದೆ. ದೇವಸ್ಥಾನದ ಸುಪರ್ದಿಯಲ್ಲಿ ಇರುವ ಕಾಡು ಮತ್ತು ಇನ್ನಿತರ ಭೂಮಿಯಲ್ಲಿ ಮರಗಳು ಇದ್ದರೆ ಅವುಗಳ ಲೆಕ್ಕ ತೆಗೆದುಕೊಳ್ಳುವಂತೆ, ಅಳತೆ ಮಾಡುವಂತೆ ಹಾಗೂ ಮರಗಳ ಹೆಸರು ಬರೆದು ಸ್ಥಿರಾಸ್ತಿ ವಹಿಯಲ್ಲಿ ದಾಖಲಿಸುವಂತೆ ಆದೇಶ ಮಾಡಬೇಕಾಗಿ ವಿನಂತಿಸಿರುತ್ತಾರೆ.

ii. ಅಕ್ರಮವಾಗಿ ಮರ ಕಡಿದಿರುವುದು ಕಂಡು ಬಂದಲ್ಲಿ ಅವರ ಕಛೇರಿಗೆ ಮಾಹಿತಿ ನೀಡುವಂತೆ ಹಾಗೂ ಈ ಬಗ್ಗೆ ಕಾನೂನಿನಂತೆ ಕ್ರಮ

ಕೈಗೊಳ್ಳಲಾಗುವುದು ಎಂದು ಪತ್ರದಲ್ಲಿ ಅರಣ್ಯಾಧಿಕಾರಿಗಳು ತಿಳಿಸಿರುತ್ತಾರೆ.

iii. ವಿಶೇಷ ತಹಶೀಲ್ದಾರ್, ಬ್ರಹ್ಮಾವರ ಅವರೇ ಶ್ರೀ ದೇವಳದ ಆಡಳಿತಾಧಿಕಾರಿಯಾಗಿದ್ದುದರಿಂದ, ಈ ಬಗ್ಗೆ ಹಲವು ಬಾರಿ ಮೌಖಿಕವಾಗಿ ಹಾಗೂ ದೂರವಾಣಿ ಮೂಲಕ ಅವರನ್ನು ದೇವಳದ ಜಮೀನುಗಳ ಸರ್ವೆ ಮಾಡಿ, ಗಡಿ ಗುರುತಿಸಿ ಕೊಡುವಂತೆ ಹಾಗೂ ಮರಗಳ ವಿವರ ಒದಗಿಸುವಂತೆ ವಿನಂತಿಸಿರುತ್ತೇನೆ.

iv. ಈ ದೂರು ಅರ್ಜಿಯಲ್ಲಿ ನಮೂದಿಸಿರುವ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಬೇಕಾಬಿಟ್ಟಿ ಲಾಭಕ್ಕಾಗಿ ಮರಮಟ್ಟುಗಳನ್ನು ಮಾರಿರುವುದು ಎಲ್ಲರಿಗೂ ತಿಳಿದ ಸತ್ಯದ ಮಾತಾಗಿದೆ. 2013ರಲ್ಲಿ ಶ್ರೀ ದೇವಳದ ಖಡ್ಗರಾವಣನ ಗುಡಿ ನಿರ್ಮಾಣಕ್ಕಾಗಿ ಮರಗಳನ್ನು ಕಡಿದ ವಿಚಾರಕ್ಕೆ ಸಂಬಂಧಿಸಿದ್ದಾಗಿದ್ದು, ಸದರಿ ವಿಚಾರವಾಗಿ ಹೆಬ್ರಿ ವಲಯ ಅರಣ್ಯಾಧಿಕಾರಿಯವರ ಕಛೇರಿಯಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ.

v. 1972 ಭೂ ಮಸೂದೆ ಕಾಯ್ದೆಯಡಿ ಶ್ರೀ ದೇವಳದ ಜಮೀನುಗಳು ಒಕ್ಕಲುಗಳ ಪಾಲಾಗಿದ್ದು, ಹಲವು ಒಕ್ಕಲುಗಳು ಮೂಲಗೇಣಿ ಮತ್ತು ಚಾಲಗೇಣಿಯ ಮೇಲೆ ದೇವಾಲಯದ ಜಾಗಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಹಿಂದೆ ಸಾವಿರಾರು ಎಕರೆ ಜಮೀನು ದೇವಸ್ಥಾನದ ಹೆಸರಿನಲ್ಲಿದ್ದು, ಪ್ರಸ್ತುತ ಎಷ್ಟು ಜಮೀನು ಶ್ರೀ ದೇವಳದ ಹೆಸರಿನಲ್ಲಿದೆ ಎಂಬ ಬಗ್ಗೆ ನಿಖರವಾದ ಮಾಹಿತಿ ಈವರೆಗೂ ಲಭ್ಯವಾಗಿರುವುದಿಲ್ಲ. ದೇವಸ್ಥಾನಕ್ಕೆ ಸಂಬಂಧಿಸಿದ 34 ಸರ್ವೆ ನಂಬರ್‌ಗಳ ನಕ್ಷೆಯನ್ನು ಮಾತ್ರ ತಯಾರಿಸಿ ನೀಡಿದ್ದು, ಈ ಜಾಗದಲ್ಲಿರುವ ಮರಗಳ ಬಗ್ಗೆ ಯಾವುದೇ ವಿವರ ಇರುವುದಿಲ್ಲ ಹಾಗೂ ಸರ್ವೆ ಮಾಡಲಾದ ಹೆಚ್ಚಿನ ಸರ್ವೆ ನಂಬರ್‌ಗಳ ಜಾಗಗಳು ಮೂಲಗೇಣಿ-ಚಾಲಗೇಣಿದಾರರ ಅನುಭೋಗದಲ್ಲಿರುತ್ತವೆ. ಶ್ರೀ ದೇವಾಲಯದ ಎಲ್ಲಾ ಜಾಗಗಳ ಸರ್ವೆ ಮಾಡಿದ ನಂತರ ಶ್ರೀ ದೇವಾಲಯದ ಅನುಭೋಗದಲ್ಲಿರುವ ಜಾಗಗಳಲ್ಲಿರುವ ಮರಮಟ್ಟುಗಳನ್ನು ಗುರುತಿಸಿ, ಅವುಗಳ ಲೆಕ್ಕ ನಿರ್ವಹಿಸಲಾಗುವುದು. ಖಡ್ಗರಾವಣ ಗುಡಿಯ ಬಗ್ಗೆ 8 ಸಾಗುವನಿ 2 ಹೆಬ್ಬಾಲಸು ಮರಗಳು ಕಡಿಯಲಾಗಿದ್ದು, ಇವುಗಳಲ್ಲಿ ಇಂಜಿನಿಯರ್‌ರವರ ಅಂದಾಜು ಪಟಿಯಲ್ಲಿ ಅಂದಾಜು 170 CFT ಮರವನ್ನು ಗುಡಿಯ

ನಿರ್ಮಾಣಕ್ಕಾಗಿ ಉಪಯೋಗಿಸಿದ್ದು, 11.50 CFT ದೇವಾಲಯದ ವಶದಲ್ಲಿರುತ್ತದೆ.

6) ದೂರಿನ ಅಂಶಗಳನ್ನು ದೂರಿಗೆ ಲಗತ್ತಿಸಿರುವ ದಾಖಲೆಗಳನ್ನು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಗಿ:-

i. 2015ನೇ ಸಾಲಿನಲ್ಲಿ ಫಿರ್ಯಾದುದಾರರು ಹಿಂದು ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರಿಗೆ ದೇವಸ್ಥಾನ ಆಸ್ತಿಯಾದ ಮರಗಳನ್ನು ಕಾಪಾಡದೆ ಕಾರ್ಯನಿರ್ವಹಣಾಧಿಕಾರಿಗಳು ಕರ್ತವ್ಯಲೋಪ ಎಸಗಿದ ಬಗ್ಗೆ ದೂರು ನೀಡಿ ಕ್ರಮ ಜರುಗಿಸಲು ಕೋರಿರುವುದು ಕಂಡು ಬರುತ್ತದೆ.

ii. 2015ನೇ ಸಾಲಿನಲ್ಲಿ ಪ್ರಸ್ತುತ ವಿಚಾರವಾಗಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಕಲಂ 50 Endowment ಕಾಯಿದೆ ರೀತ್ಯಾ 2ನೇ ಎದುರುದಾರರವರ ವಿರುದ್ಧ ನೀಡಿದ ದೂರು ಪ್ರಕರಣ ದಾಖಲಾದ ಬಗ್ಗೆ ಕಂಡು ಬರುತ್ತದೆ.

iii. 2013-14ನೇ ಸಾಲಿನಲ್ಲಿ ವ್ಯವಸ್ಥಾಪನಾ ಸಮಿತಿಯ ಸದಸ್ಯರ ವಿರುದ್ಧ ದೇವಸ್ಥಾನದ ಜಾಗದಲ್ಲಿ ಅಕ್ರಮವಾಗಿ ಮರಗಳನ್ನು ಕಡಿದ ಆರೋಪಕ್ಕಾಗಿ ಅರಣ್ಯ ಮೊಕದ್ದಮೆ ದಾಖಲಾಗಿರುವುದು ವಲಯ ಅರಣ್ಯ ಅಧಿಕಾರಿಯವರ ಪತ್ರದ ಮೂಲಕ ಕಂಡು ಬರುತ್ತದೆ.

iv. 2ನೇ ಎದುರುದಾರರವರು ವಿಶೇಷ ತಹಶೀಲ್ದಾರ್, ಬ್ರಹ್ಮಾವರರವರಿಗೆ ದೇವಸ್ಥಾನದ ಸ್ವತ್ತಿನ ಗಡಿ ಗುರ್ತು ಮಾಡಿಕೊಡಲು ಮನವಿ ಪತ್ರಗಳನ್ನು ಕೊಟ್ಟಿರುವುದಾಗಿ ದಾಖಲೆಗಳಿಂದ ಕಂಡು ಬಂದಿದ್ದರೂ, ಸರ್ವೆ ಮಾಡುವವರೆಗೆ 1 ಮತ್ತು 2ನೇ ಎದುರುದಾರರವರು ದೇವಸ್ಥಾನದ ಆಸ್ತಿ ರಕ್ಷಣೆಯ ಹೊಣೆ ಹೊಂದಿರುವವರಾಗಿದ್ದು, ಮರಕಡಿಯದಂತೆ ಕ್ರಮ ವಹಿಸಿ ದೇವಸ್ಥಾನದ ಆಸ್ಥಿಯನ್ನು ರಕ್ಷಣೆ ಮಾಡದೆ ಕರ್ತವ್ಯಲೋಪ ಎಸಗಿ ದುರ್ನಡತೆ ಎಸಗಿರುವುದು ಕಂಡು ಬರುತ್ತದೆ.

v. 2013 ರಿಂದ ಇಲ್ಲಿಯವರೆಗೂ ದೇವಸ್ಥಾನದ ಮರ, ಸ್ಥಿರಾಸ್ತಿಗಳನ್ನು ರಕ್ಷಣೆ ಮಾಡುವಲ್ಲಿ ಎದುರುದಾರರು ಸೂಕ್ತ ಕ್ರಮ ಜರುಗಿಸಿ ರಕ್ಷಣೆ ಮಾಡಿ ಕ್ರಮ ಜರುಗಿಸದೆ ಇರುವುದು ಕಂಡು ಬರುತ್ತದೆ.

7) ಕಾರಣ, 2013 ರಿಂದ ಇಲ್ಲಿಯವರೆಗೆ ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ದೇವಸ್ಥಾನಕ್ಕೆ ಸಂಬಂಧಪಟ್ಟ ಕಾರ್ಯನಿರ್ವಹಿಸಿದ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ನೌಕರರಾದ ಸಹಾಯಕ ಆಯುಕ್ತರ ಹಾಗೂ ಕಾರ್ಯನಿರ್ವಾಹಣಾಧಿಕಾರಿಗಳ ಹೆಸರು ಮತ್ತು ವಿಳಾಸವನ್ನು ಪಡೆದಿದ್ದು, ಈ ಕೆಳಗಿನಂತೆ ಇರುತ್ತದೆ

(1) ಶ್ರೀ ಎನ್.ಎಸ್.ದೊಡ್ಡಮನಿ, ಹಿಂದಿನ ಪ್ರಭಾರ ಸಹಾಯಕ ಆಯುಕ್ತರು, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು, ಹಾಲಿ ನಿವೃತ್ತ, ವಾಸ: ಎನ್.ಎಸ್.ದೊಡ್ಡಮನಿ ಕೇ/ಆಫ್ ಶ್ರೀ ವಿಶ್ವನಾಥ್ ಭಟ್, "ಅನುಗ್ರಹ" 3ನೇ ಕ್ರಾಸ್, ವಾದಿರಾಜ ಮಾರ್ಗ, ಉಡುಪಿ.

(2) ಶ್ರೀ ಎಸ್.ಸಿ.ಕೋಟಾರಗಸ್ತಿ, ಹಿಂದಿನ ಪ್ರಭಾರ ಸಹಾಯಕ ಆಯುಕ್ತರು, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು, ಹಾಲಿ ಕಾರ್ಯನಿರ್ವಾಹಣಾಧಿಕಾರಿ, ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ, ಸವದತ್ತಿ, ಬೆಳಗಾವಿ ಜಿಲ್ಲೆ.

(3) ಶ್ರೀ ಪ್ರವೀಣ್ ಬಿ. ನಾಯಕ್, ಹಿಂದಿನ ಪ್ರಭಾರ ಸಹಾಯಕ ಆಯುಕ್ತರು, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು, ಹಾಲಿ ಉಪ ನಿಬಂಧಕರು, ಸಹಕಾರ ಸಂಘಗಳ ಇಲಾಖೆ, ಉಡುಪಿ.

(4) ಶ್ರೀ ಶೇಷಪ್ಪ ಪೂಜಾರಿ, ಹಿಂದಿನ ಕಾರ್ಯನಿರ್ವಹಣಾಧಿಕಾರಿ, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು, ಹಾಲಿ ನಿವೃತ್ತ, ವಾಸ: ಪೊಯ್ಯಲೆ ಹೌಸ್, ಮೇರಮಜಲು ಅಂಚೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ,

(5) ಶ್ರೀ ಗಣೇಶ್‌ರಾವ್, ಹಿಂದಿನ ಪ್ರಭಾರ ಕಾರ್ಯನಿರ್ವಹಣಾಧಿಕಾರಿ, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು, ಹಾಲಿ ಪರವೀಕ್ಷಕರು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾರಾಯ ದತ್ತಿಗಳ ಇಲಾಖೆ, ಉಡುಪಿ ವಿಭಾಗ,

(6) ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿ, ಹಿಂದಿನ ಪ್ರಭಾರ ಕಾರ್ಯನಿರ್ವಹಣಾಧಿಕಾರಿ, ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ತಾಲ್ಲೂಕು, ಹಾಲಿ ಕಾರ್ಯನಿರ್ವಹಣಾಧಿಕಾರಿ, ಶ್ರೀ

ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ, ಪಡುಬಿದ್ರಿ, ಉಡುಪಿ ತಾಲ್ಲೂಕು,

8) ಮೇಲ್ಕಾಣಿಸಿದವರು 2013ನೇ ಸಾಲಿನಿಂದ ಎದುರುದಾರರ ಹುದ್ದೆಯಲ್ಲಿ ಕೆಲಸ ನಿರ್ವಹಿಸಿದ ಅಧಿಕಾರಿಗಳಾಗಿದ್ದು, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಕ್ರಮ ಜರುಗಿಸುವ ಹೊಣೆಯಿರುವ ಅಧಿಕಾರಿಗಳಾಗಿದ್ದು, ಯಾವುದೇ ಕ್ರಮ ಜರುಗಿಸದೇ ಕರ್ತವ್ಯಲೋಪವೆಸಗಿದ್ದು ಕಂಡು ಬಂದಿದ್ದರಿಂದ. ಸದರಿಯವರನ್ನು 3 ರಿಂದ 8ನೇ ಎದುರುದಾರರನ್ನಾಗಿ ಸೇರಿಸಿ ಅವರುಗಳಿಂದ ಆಕ್ಷೇಪಣೆಗಳನ್ನು ಪಡೆಯಲಾಗಿರುತ್ತದೆ.

9) <u>3ನೇ ಎದುರುದಾರರಾದ ಶ್ರೀ.ಎನ್.ಎಸ್. ದೊಡ್ಡಮನಿರವರ ಆಕ್ಷೇಪಣೆಗಳು:</u> ದೂರಿನೊಂದಿಗೆ ದಿನಾಂಕ: 24/01/2015 ರಂದು ಸಹಾಯಕ ಆಯುಕ್ತರಿಗೆ ಸಲ್ಲಿಸಿದ ದೂರು ಅರ್ಜಿಯನ್ನು ಲಗತ್ತಿಸಿದ್ದು ಪರಿಶೀಲಿಸಲಾಗಿ ಈ ಸಂದರ್ಭದಲ್ಲಿ ತಾವು ಸಹಾಯಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ. ಆ ಸಂದರ್ಭದಲ್ಲಿದ್ದ ಸಹಾಯಕ ಆಯುಕ್ತರು ಈ ದೂರು ಅರ್ಜಿಗೆ ಸಂಬಂಧಿಸಿ ನಿಯಮಾನುಸಾರ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಂಡಿದ್ದು, ದೂರುದಾರರ ಆರೋಪದಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ದೇವಸ್ಥಾನದ ಜಾಗವನ್ನು ಜಿ.ಪಿ.ಎಸ್. ಸರ್ವೆ ಮಾಡಿಸಿ ಆ ಜಾಗಗಳಲ್ಲಿರುವ ಮರಗಳ ಬಗ್ಗೆ ಸರ್ವೆ ಮಾಡಿಸಿ ಸೂಕ್ತ ಕ್ರಮಕೈಗೊಳ್ಳಲು ದಿನಾಂಕ: 04/11/2016 ರಂದು ಶ್ರೀ ದೇವಳದ ಕಾರ್ಯನಿರ್ವಹಣಾಧಿಕಾರಿಯವರಿಗೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ದೂರಿನ ಬಗ್ಗೆ ವಿಚಾರಣೆ ನಡೆಸಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ದಿನಾಂಕ: 28/02/2014 ರಂದು ವರದಿ ಸಲ್ಲಿಸಿರುತ್ತೇನೆ. ಮರ ಕಡಿಯುವ ಬಗ್ಗೆ ಅರಣ್ಯ ಇಲಾಖೆಯಿಂದ ಪೂರ್ವಾನುಮತಿ ಪಡೆಯದ ಬಗ್ಗೆ ಅರಣ್ಯ ಇಲಾಖೆಯಲ್ಲಿ ಪ್ರಕರಣ ವಿಚಾರಣೆಯಲ್ಲಿರುವುದು ಕಂಡುಬಂದಿರುತ್ತದೆ. ಕಡಿದ ಮರಗಳನ್ನು ಖಡ್ಗರಾವಣ ಗುಡಿ ನಿರ್ಮಾಣಕ್ಕೆ ಬಳಕೆ ಮಾಡಿಕೊಂಡಿದ್ದರೂ ಸಹಾ ಇವುಗಳನ್ನು ಬಳಕೆ ಮಾಡಿದ ಬಗ್ಗೆ ಸ್ಟಾಕ್ ವಿವರ ಒದಗಿಸದೇ ಇರುವುದರಿಂದ ಕಡಿದು

ಮರಗಳಲ್ಲಿ ಎಷ್ಟು ಪ್ರಮಾಣದ ಕಟ್ಟಿಗೆಯನ್ನು ನಿರ್ಮಾಣಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ ಹಾಗೂ ಅದರಲ್ಲಿ ಉಳಿತಾಯವಾಗಿರುವುದೆಷ್ಟು ಎಂಬುದನ್ನು ತಿಳಿದುಕೊಳ್ಳಲು ಅಸಾಧ್ಯವಾಗಿದೆ. ಕಡಿದ ಮರಗಳ ಬಳಕೆಯ ಬಗ್ಗೆ ಸ್ಟಾಕಿನ ವಿವರಗಳನ್ನು ಇಟ್ಟಿರುವುದಿಲ್ಲ ಎಂದು ನಮೂದಿಸಿರುತ್ತಾರೆ.ತಮ್ಮ ಆಕ್ಷೇಪಣೆಗಳೊಂದಿಗೆ ಜಿಲ್ಲಾಧಿಕಾರಿಗಳಿಗೆ ದಿನಾಂಕ: 28/02/2014 ರಂದು ನೀಡಿದ ವರದಿ ಪ್ರತಿಯನ್ನು ಲಗತ್ತಿಸಿರುತ್ತಾರೆ.

10) ಸ್ಥಳ <u>4ನೇ ಎದುರುದಾರರಾದ ಶ್ರೀ.ಎಸ್.ಸಿ. ಕೊಟಾರಗಸ್ತಿರವರ ಆಕ್ಷೇಪಣೆಗಳು:</u> ತಾವು ಶ್ರೀ ಕ್ಷೇತ್ರ ಮಂದಾರ್ಥಿ ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಕಾರ್ಯನಿರ್ವಹಕ ಅಧಿಕಾರಿಯಾಗಿ ದಿನಾಂಕ: 26/10/2016 ರಿಂದ 12/07/2017 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಸಹಾಯಕ ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ, ಉಡುಪಿ, ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಯೋಗೇಶ್ವರ ಕೆ.ಎ.ಎಸ್. ಇವರು ವರ್ಗಾವಣೆಗೊಂಡ ಪ್ರಯುಕ್ತ ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ ಅವರ ಆದೇಶದಂತೆ ದಿನಾಂಕ: 01/04/2017 ರಿಂದ 12/07/2017 ರವರೆಗೆ ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಉಡುಪಿ ಇಲ್ಲಿನ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಂಡು ಕರ್ತವ್ಯ ನಿರ್ವಹಿಸಿದ್ದು ಇರುತ್ತದೆ. ಸದರಿ ಪ್ರಕರಣದ ವಿಷಯವಾಗಿ ಸಂಬಂಧಿಸಿದ ಕಡತ ಪರಿಶೀಲಿಸಿದ್ದು, ಹಾಗೂ ಸದರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಯವರ ವರದಿಯನ್ನು ಪರಿಶೀಲಿಸಿದ್ದು ಈ ದೇವಸ್ಥಾನಕ್ಕೆ ಸಂಬಂಧಪಟ್ಟ ಸ್ಥಿರಾಸ್ಥಿಯಲ್ಲಿರುವ ಹಲವು ಮರಮಟ್ಟುಗಳನ್ನು ಸರ್ವೆ ಮಾಡಿಸಿ ಅವುಗಳ ಪೋಲಾಗದಂತೆ ರಕ್ಷಿಸುವಲ್ಲಿ ಕ್ರಮ ಕೈಗೊಂಡಿದ್ದು ತಿಳಿದು ಬರುತ್ತದೆ ಎಂದು ನಮೂದಿಸಿರುತ್ತಾರೆ.

11) <u>5ನೇ ಎದುರುದಾರರಾದ ಶ್ರೀ. ಪ್ರವೀಣ ಬಿ ನಾಯಕ್‌ರವರ ಆಕ್ಷೇಪಣೆಗಳು:</u> ತಾವು ಉಡುಪಿ ಜಿಲ್ಲೆಯ ಸಹಕಾರಿ ಸಂಘಗಳ ಇಲಾಖೆಯ ಉಪ ನಿಬಂಧಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ ಇವರ ಪತ್ರ ದಿನಾಂಕ:

12/07/2017ರ ಆದೇಶದಂತೆ ದಿನಾಂಕ: 13/07/2017 ರಿಂದ ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದರ್ಮಾದಾಯ ದತ್ತಿಗಳ ಇಲಾಖೆ, ಉಡುಪಿ ಇಲ್ಲಿನ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಂಡಿರುವುದಾಗಿಯೂ, ಪ್ರಕರಣದ ಪರಿಶೀಲನೆಯಿಂದ ಹಾಗೂ ಶ್ರೀ ದೇವಾಲಯದ ಕಾರ್ಯನಿರ್ವಹಣಾಧಿಕಾರಿಯವರ ವರದಿಯ ಪರಿಶೀಲನೆಯಿಂದ ದೇವಸ್ಥಾನಕ್ಕೆ ಸಂಬಂಧಪಟ್ಟ ಸ್ಥಿರಾಸ್ತಿಯಲ್ಲಿರುವ ಮರಮಟ್ಟುಗಳನ್ನು ಸರ್ವೆ ಮಾಡಿಸಿ ಅವುಗಳನ್ನು ರಕ್ಷಿಸುವಲ್ಲಿ ಕ್ರಮ ಕೈಗೊಂಡಿದ್ದು ಕಂಡುಬರುತ್ತದೆ. ಕಳೆದ ಒಂದು ವರ್ಷದಿಂದ ಸಹಾಯಕ ಆಯುಕ್ತರ (ಪ್ರಭಾರ) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದರ್ಮಾದಾಯ ದತ್ತಿಗಳ ಇಲಾಖೆ, ಉಡುಪಿ ಈ ಹುದ್ದೆ ನಿರ್ವಹಿಸಿದ ಅವಧಿಯಲ್ಲಿ ತಮ್ಮ ಹಂತದಲ್ಲಿ ಯಾವುದೇ ಕರ್ತವ್ಯ ಲೋಪ ಆಗಿರುವುದಿಲ್ಲವೆಂದು ನಮೂದಿಸಿರುತ್ತಾರೆ. ದಿನಾಂಕ: 04/11/2016 ರಂದು ಸಹಾಯಕ ಆಯುಕ್ತರು ಜ್ಞಾಪನ ಪತ್ರ ನೀಡಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಜಿ.ಪಿ.ಎಸ್. ಸರ್ವೆ ಮಾಡಿಸಲು ಸೂಚಿಸಿದ ಆದೇಶದ ಪ್ರತಿ, ಆಯುಕ್ತರು ನಡೆಸಿದ ವಿಚಾರಣೆ ನಡಾವಳಿ ಪ್ರತಿ, ವಿಚಾರಣೆಗೆ ಹಾಜರಾಗಲು ನೀಡಿದ ನೋಟಿಸ್ ಪ್ರತಿ, ವಲಯ ಅರಣ್ಯಾಧಿಕಾರಿಗಳು ಅಕ್ರಮವಾಗಿ ಮರ ಕಡಿದಲ್ಲಿ ಮಾಹಿತಿ ನೀಡುವಂತೆ ಕಾರ್ಯ ನಿರ್ವಾಹಕರಿಗೆ ನೀಡಿದ ಹಿಂಬರಹ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

12) <u>6ನೇ ಎದುರುದಾರರಾದ ಶ್ರೀ. ಶೇಷಪ್ಪ ಪೂಜಾರಿರವರ ಆಕ್ಷೇಪಣೆಗಳು</u>: ದಿನಾಂಕ: 14/03/2013 ರಂದು ಮಹತೋಭಾರ ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ, ಇಲ್ಲಿನ ಕಾರ್ಯನಿರ್ವಹಣಾಧಿಕಾರಿಯವರ ಪ್ರಭಾರವನ್ನು ಪಡೆದುಕೊಂಡು ದಿನಾಂಕ: 14/03/2013 ರಿಂದ 31/08/2013 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ಸದರಿ ದೇವಸ್ಥಾನದ ವತಿಯಿಂದ 2012-13ನೇ ಸಾಲಿನಲ್ಲಿ ಅಷ್ಟಬಂಧ, ಅಷ್ಟಮಂಗಳ ಪ್ರಶ್ನೆ, ಖಡ್ಗರಾವಣನ ಗುಡಿ ನವೀಕರಣ ಮುಂತಾದ ಕಾರ್ಯಕ್ರಮಗಳು ದೇವಸ್ಥಾನದ ವತಿಯಿಂದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರ ಮೂಲಕ ಹಮ್ಮಿಕೊಳ್ಳಲಾಗಿತ್ತು. ಶ್ರೀ ದೇವಳದಲ್ಲಿ ಜೀರ್ಣಾವಸ್ಥೆಯಲ್ಲಿದ್ದ ಖಡ್ಗರಾವಣನ ಗುಡಿಯನ್ನು ನವೀಕರಣ

ಮಾಡುವುದೆಂದು ನಿಶ್ಚಯಿಸಿ ವ್ಯವಸ್ಥಾಪನಾ ಸಮಿತಿಯವರು ರೂ.21.30 ಲಕ್ಷ ಮೊತ್ತದ ಅಂದಾಜು ಪಟ್ಟಿ ತಯಾರಿಸಿ ಈ ಅಂದಾಜು ಪಟ್ಟಿಗೆ ತಾಂತ್ರಿಕ ಹಾಗೂ ಆಡಳಿತ ಮಂಜೂರಾತಿ ಪಡೆಯಲಾಗಿತ್ತು. ಇದಕ್ಕೆ ಬೇಕಾಗುವ ಮರಗಳನ್ನು ದೇವಳದ ಆಸ್ತಿಯಲ್ಲಿರುವ ಮರಗಳನ್ನು ಕಡಿಯುವ ಬಗ್ಗೆ ಹಿಂದೆಯೇ ತಾವು ಪ್ರಭಾರ ಪಡೆಯುವ ಮೊದಲೇ ನಿಶ್ಚಯಿಸಲಾಗಿತ್ತು. ಮರ ಕಡಿಯಲು ಅರಣ್ಯ ಇಲಾಖೆಯಿಂದ ಅನುಮತಿಯನ್ನು ಪಡೆಯಲು ಪತ್ರ ವ್ಯವಹಾರ ಮಾಡಲಾಗಿತ್ತು. ದಿನಾಂಕ: 20/05/2013 ರಂದು ಖಡ್ಗರಾವಣನ ಗುಡಿಯ ಪುನರ್ ಪ್ರತಿಷ್ಠೆ ಕಾರ್ಯಕ್ರಮ ನಡೆಸಲು ಭಕ್ತಾಧಿಗಳಿಗೆ ಆಮಂತ್ರಣ ಪತ್ರಿಕೆ ಕಳುಹಿಸಿಕೊಡಲಾಗಿತ್ತು. ತಾವು ಪ್ರಭಾರ ವಹಿಸಿಕೊಳ್ಳುವ ಹಿಂದಿನ ಅವಧಿಯಲ್ಲಿ ಕೆಲವು ಮರಗಳನ್ನು ಕಡಿದಿದ್ದು ಆ ಬಗ್ಗೆ ಅರಣ್ಯ ಇಲಾಖೆಯವರು ಕಾನೂನು ಕ್ರಮ ಕೈಗೊಂಡಿರುವುದು ದೇವಸ್ಥಾನದ ದಾಖಲೆಯಲ್ಲಿ ಕಂಡುಬರುತ್ತದೆ ಎಂದು ನಮೂದಿಸಿರುತ್ತಾರೆ.

ಕಾರ್ಯನಿರ್ವಾಹಣಾಧಿಕಾರಿಗಳು ತಮ್ಮ ಪತ್ರ ದಿನಾಂಕ: 05/01/2013 ರಲ್ಲಿ ಖಡ್ಗರಾವಣ ಗುಡಿ ನಿರ್ಮಾಣ ಬಗ್ಗೆ 250 ಸಿ.ಎಫ್.ಟಿ. ಮರದ ಅವಶ್ಯಕತೆ ಇದ್ದು, ನಮಗೆ ನಮ್ಮ ದೇವಸ್ಥಾನಕ್ಕೆ ಸೇರಿದ ಪೆರ್ಡೂರು ಗ್ರಾಮದ ಸರ್ವೆ ನಂ. 383/3 ರಲ್ಲಿ ಮತ್ತು 129/31 ರಲ್ಲಿ ಸಾಗುವನಿ ಮರಗಳು ಇದ್ದು ಆ ಮರಗಳನ್ನು ಕಡಿಯುವುದು ಎಂದು ತೀರ್ಮಾನಿಸಲಾಗಿದೆ. ಈ ಬಗ್ಗೆ ಆರ್.ಟಿ.ಸಿ. ಮತ್ತು ಸ್ಥಳೀಯ ಗ್ರಾಮಕರಣಿಕರಿಂದ ನಕ್ಷೆಯನ್ನು ತಯಾರಿಸಿದ್ದು ಖಡ್ಗರಾವಣ ಗುಡಿ ನಿರ್ಮಾಣಕ್ಕೆ ಬೇಕಾಗಿರುವ 250 ಸಿಎಫ್‌ಟಿ ಸಾಗುವನಿ ಮರವನ್ನು ಕಡಿಯಲು ಅನುಮತಿ ನೀಡಬೇಕಾಗಿ ವಿನಂತಿಸಿ ವಲಯ ಸಂರಕ್ಷಣಾಧಿಕಾರಿ, ಹೆಬ್ರಿ ವಲಯ ರವರಿಗೆ ಬರೆದ ಪತ್ರದ ಪ್ರತಿ, ದಿನಾಂಕ: 03/08/2013 ರಂದು ವಲಯ ಅರಣ್ಯಾಧಿಕಾರಿಗಳು ಸದರಿ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದ ಪತ್ರದ ಪ್ರತಿ, ಮರ ಕಡಿದವರ ವಿರುದ್ಧ ಅರಣ್ಯ ಕಾಯ್ದೆಗಳ ಅರಣ್ಯ ಮೊಕದ್ದಮೆ ನಂ. 84/2013-14 ದಾಖಲಿಸಿದ ಬಗ್ಗೆ ಬರೆದ ಪತ್ರದ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

13) <u>7ನೇ ಎದುರುದಾರರಾದ ಶ್ರೀ. ಗಣೇಶ್‌ರಾವ್‌ರವರ ಆಕ್ಷೇಪಣೆಗಳು:</u> ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿಯವರ ದಿನಾಂಕ: 15/12/2012ರ ಸಭೆಯಲ್ಲಿ ದೇವಸ್ಥಾನದ ಉಪ ದೇವರಾದ ಖಡ್ಗರಾವಣ ಗುಡಿ ನವೀಕರಿಸುವ ಬಗ್ಗೆ 250 ಸಿಎಫ್‌ಟಿ ಮರದ ಅವಶ್ಯಕತೆ ಇರುವುದಾಗಿಯೂ ಈ ಬಾಬ್ತು ಮರ ಕಡಿಯುವ ಬಗ್ಗೆ ನಿರ್ಣಯಿಸಿರುವುದು ಕಂಡುಬರುತ್ತದೆ. ಈ ಪ್ರಕಾರ ಸದರಿ ಅವಧಿಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಟಿ.ಜಿ.ಸುಧಾಕರ ಇವರ ಪತ್ರ ಸಂಖ್ಯೆ: 34/2012-13, ದಿನಾಂಕ: 05/01/2013 ರಂತೆ ವಲಯ ಅರಣ್ಯಾಧಿಕಾರಿಯವರಿಗೆ ಖಡ್ಗರಾವಣ ಗುಡಿ ನವೀಕರಿಸುವ ಬಾಬ್ತು ಅವಶ್ಯಕತೆ ಇರುವ 250 ಸಿಎಫ್‌ಟಿ ಮರವನ್ನು ಕಡಿಯುವ ಬಗ್ಗೆ ಅನುಮತಿ ಕೋರಿರುವುದು ಕಂಡುಬರುತ್ತದೆ. ಸದರಿ ಅವಧಿಯ ಪೂರ್ಣ ಪ್ರಮಾಣದ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಟಿ.ಜಿ.ಸುಧಾಕರ ಇವರು ರಜೆಯಲ್ಲಿ ಹೋದ ನಿಮಿತ್ತ ತಾವು ಮಾನ್ಯ ಜಿಲ್ಲಾಧಿಕಾರಿಯವರು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಉಡುಪಿ ಇವರ ಆದೇಶ ಸಂಖ್ಯೆ: ಡಿವಿಎಸ್.ಇಎಸ್‌ಟಿ.ಸಿಆರ್ 30/2012-13, ದಿನಾಂಕ: 04/01/2013 ರಂತೆ ದಿನಾಂಕ: 07/01/2013 ರಂದು ನಗದು ಪುಸ್ತಕಕ್ಕೆ ಮಾತ್ರ ಸಹಿ ಮಾಡಿ ದಿನಾಂಕ: 03/02/2013 ರವರೆಗೆ ಶ್ರೀ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಪ್ರಭಾರವನ್ನು ವಹಿಸಿಕೊಂಡು ದೇವಳದ ದೈನಂದಿನ ಆಡಳಿತವನ್ನು ನಿರ್ವಹಿಸಿದ್ದು, ಶ್ರೀ ದೇವಾಲಯದ ಖಡ್ಗರಾವಣ ಗುಡಿ ನಿರ್ಮಾಣ ಸಮಯದಲ್ಲಿ ಶ್ರೀ ಶೇಷಪ್ಪ ಪೂಜಾರಿಯವರು ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆಂದು ತಿಳಿಸಿರುತ್ತಾರೆ.

14) <u>8ನೇ ಎದುರುದಾರರಾದ ಶ್ರೀ. ಪ್ರಶಾಂತಕುಮಾರ್ ಶೆಟ್ಟಿರವರ ಆಕ್ಷೇಪಣೆಗಳು:</u> ದಿನಾಂಕ: 15/12/2017 ರಿಂದ ಪೆರ್ಡೂರು ಅನಂತಪದ್ಮನಾಭ ದೇವಸ್ಥಾನದ ಪ್ರಭಾರ ಕಾರ್ಯನಿರ್ವಹಣಾಧಿಕಾರಿಯವರ ಕರ್ತವ್ಯ ನಿರ್ವಹಿಸಿದ್ದು, ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿಯವರು ದಿನಾಂಕ: 15/12/2012ರ ಸಭೆಯಲ್ಲಿ ದೇವಸ್ಥಾನದ ಉಪದೇವರಾದ ಖಡ್ಗರಾವಣ ಗುಡಿ ನಿರ್ಮಾಣಕ್ಕೆ 250 ಸಿ.ಎಫ್.ಟಿ. ಮರದ ಅವಶ್ಯಕತೆ ಇರುವುದರಿಂದ

ದೇವಳಕ್ಕೆ ಸೇರಿದ ಜಾಗದ ಮರಗಳನ್ನು ಕಡಿಯುವುದೆಂದು ನಿರ್ಣಯಿಸಿದ್ದು ನಿರ್ಮಾಣ ಕಾರ್ಯವನ್ನು ಆಡಳಿತ ಮಂಡಳಿಯವರು ಕೈಗೊಂಡಿದ್ದರಿಂದ, ದಿನಾಂಕ: 07/01/2013 ರಿಂದ 31/01/2013 ರವರೆಗೆ ಉಡುಪಿ ವಿಭಾಗದ ಧಾರ್ಮಿಕ ದತ್ತಿ ಇಲಾಖಾ ಪರಿವೀಕ್ಷಕರಾದ ಶ್ರೀ ಗಣೇಶ ರಾವ್ ಇವರು ಪ್ರಭಾರದಲ್ಲಿ ಇದ್ದು ಆ ಸಮಯದಲ್ಲಿ ಅಂದರೆ ದಿನಾಂಕ: 07/01/2013 ರಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಮರವನ್ನು ಕಡಿದಿದ್ದು ಸದರಿ ಮರಗಳನ್ನು ದೇವಸ್ಥಾನದ ನಿರ್ಮಾಣಕ್ಕಾಗಿ ಬಳಕೆ ಮಾಡಿರುವುದು ಕಂಡುಬರುತ್ತದೆ. ಶ್ರೀ ಅನಂತಪದ್ಮನಾಭ ದೇವಸ್ಥಾನದ 2 ಸಾಗುವನಿ, 1 ಹೆಬ್ಬಲಸು ಮರವನ್ನು ಅಕ್ರಮವಾಗಿ ಕಡಿದು ಸಿಗಿದು ಸೈಜುಗಳನ್ನಾಗಿ ಪರಿವರ್ತಿಸಿ ದಾಸ್ತಾನು ಇರಿಸಿದ ಆರೋಪಕ್ಕಾಗಿ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಶ್ರೀ ಸದಾಶಿವ ಶೆಟ್ಟಿಯವರ ಮೇಲೆ ಅರಣ್ಯ ಅಧಿಕಾರಿಗಳು ಮೊಕದ್ದಮೆ ಸಂಖ್ಯೆ: 84/2013-14ನ್ನು ದಾಖಲಿಸಿರುತ್ತಾರೆ. ಇವರು ಮರ ಕಡಿದ ಬಗ್ಗೆ ರೂ.32,237/- ಗಳನ್ನು ದಂಡವಾಗಿ ಪಾವತಿಸಿರುತ್ತಾರೆ. ಖಡ್ಗರಾವಣ ಗುಡಿ ನಿರ್ಮಾಣ ಸಮಯದಲ್ಲಿ ಶ್ರೀ ಶೇಷಪ್ಪ ಪೂಜಾರಿಯವರು ಕಾರ್ಯನಿರ್ವಹಣಾಧಿಕಾರಿಯಾಗಿದ್ದು, ದೇವಸ್ಥಾನದ ಪಟ್ಟಿ ಸ್ಥಳದಲ್ಲಿ ಕಡಿದ ಮರಗಳ ಪೈಕಿ ಇಂಜಿನಿಯರ್ ರವರ ಅಂದಾಜು ಪಟ್ಟಿಯನ್ನು 170 ಸಿ.ಎಫ್.ಟಿ. ಮರವನ್ನು ಖಡ್ಗರಾವಣ ಗುಡಿ ನಿರ್ಮಾಣಕ್ಕೆ ಉಪಯೋಗಿಸಿ ಉಳಿದ 11.50 ಸಿ.ಎಫ್.ಟಿ. ಮರ ದೇವಸ್ಥಾನದ ಸುಪರ್ದಿಯಲ್ಲಿ ಇರುತ್ತದೆ. ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಬೇಕಾಬಿಟ್ಟಿ ಲಾಭಕ್ಕಾಗಿ ಮಾರಿರುವುದು ಎಲ್ಲರಿಗೂ ತಿಳಿದ ಸತ್ಯದ ಮಾತಾಗಿದೆ. ಕಡಿದ ಮರವನ್ನು ದೇವಸ್ಥಾನದ ಖಡ್ಗ ರಾವಣ ಗುಡಿಯ ನಿರ್ಮಾಣಕ್ಕಾಗಿ ಬಳಕೆ ಮಾಡಲಾಗಿರುತ್ತದೆ. ಬಳಕೆ ಆಗದೆ ಉಳಿದ ಮರವನ್ನು ಸ್ಟಾಕ್ ರಿಜಿಸ್ಟರ್‌ನಲ್ಲಿ ದಾಖಲಿಸಲಾಗಿದ್ದು, ಅವುಗಳು ದೇವಸ್ಥಾನದ ವಶದಲ್ಲಿ ಇರುತ್ತದೆ. ದೇವಳದ ಮರಗಳನ್ನು ಕಡಿಯುವ ಸಮಯ ಮತ್ತು ದೂರುದಾರರು ದೂರು ಸಲ್ಲಿಸುವಾಗ ತಾವು ಕಾರ್ಯನಿರ್ವಹಣಾಧಿಕಾರಿ ಆಗಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ಹಣ ಸ್ವೀಕೃತಿ ಪತ್ರದ ಪ್ರತಿ, ಮರದ ವಿವರ ಇರುವ ದಾಖಲೆ ಪ್ರತಿ, ಮರದ ಪಟ್ಟಿ ಪ್ರತಿ, ಮಹಜರ್ ಪ್ರತಿ, ಫೋಟೊ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

15) ಸದರಿ ಪ್ರಕರಣದಲ್ಲಿ 1 ರಿಂದ 8ನೇ ಎದುರುದಾರರ ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ ಕಂಡು ಬರುವ ಅಂಶಗಳೆನೆಂದರೆ: ಅನಂತಪದ್ಮನಾಭ ದೇವಸ್ಥಾನ, ಪೆರಡೂರು, ಈ ದೇವಸ್ಥಾನದ ಅನೇಕ ಆಸ್ತಿಗಳಿದ್ದು ಅದರ ಸಂಬಂಧ 2012 ರಿಂದ 2016ರವರೆಗೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು. ನಿರ್ಲಕ್ಷ್ಯ ತೋರಿದ್ದರಿಂದ, ದೇವಸ್ಥಾನದ ಅನೇಕ ಬೆಲೆ ಬಾಳುವ ಮರಗಳನ್ನು ಅನಧಿಕೃತವಾಗಿ ಕತ್ತರಿಸಿ ದೇವಸ್ಥಾನದ ಸಮಿತಿ ಲಾಭ ಮಾಡಿಕೊಂಡಿರುವುದಾಗಿ ಫಿರ್ಯಾದಿದಾರರು ಹೇಳಿದ್ದನ್ನು ನಿರಾಕರಿಸುತ್ತಾ ದಿನಾಂಕ 7.2.2015. 26.5.2015ರಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೋಟೀಸು ನೀಡಲಾಗಿರುತ್ತದೆ ದಿ. 11.2015ರಂದುಮಧ್ಯಾಹ್ನ 3 ಗಂಟೆಗೆ ದೂರುದಾರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯ ಸಮಕ್ಷಮ ದೂರುದಾರರು ಕೋರಿರುವಂತೆ. ದೇವಸ್ಥಾನದ ಆಸ್ತಿ ರಿಜಿಸ್ಟರನ್ನು 2 ತಿಂಗಳೊಳಗೆ ಎಲ್ಲಾ ಮಹಿತಿಯನ್ನು ದಾಖಲಿಸಿ ವರದಿ ಸಲ್ಲಿಸಲು ಕಾರ್ಯನಿರ್ವಾಹಕ ಅಧಿಕಾರಿಗೆ ನಿರ್ದೇಶನ ನೀಡಲಾಗಿತ್ತು. ಈ ಕುರಿತು ಜಾಗಗಳ ಆಸ್ತಿಯ ಸಂಬಂಧ ಜಿಪಿಎಸ್ ಸರ್ವೆ ಮಾಡಿಸಿ ಸದರಿ ಜಾಗದಲ್ಲಿರುವ ಮರಗಳ ವಿವರವನ್ನು ನಮೂದಿಸಿ ಭೂದಾಖಲೆಗಳ ಉಪನಿರ್ದೇಶಕರಿಗೆ ಕ್ರಮ ವಹಿಸುವಂತೆ ಸೂಚಿಸಲಾಗಿತ್ತು. ದಿ. 25.10.2016ರಂದು ಸ್ಥಾನಿಕ ವಿಚಾರಣೆ ನಡೆಸಲಾಗಿರುತ್ತದೆ. ತಹಶೀಲ್ದಾರರು ಸ್ಥಳಕೆ ಬೇಟಿ ನೀಡಿದಾಗ ಜಿಪಿಎಸ್ ಸರ್ವೆ ಮಾಡಿಸುವಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿತ್ತು. ಈ ಕುರಿತು ದೂರಿನ ವಿಷಯ ಕುರಿತು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದೇವಸ್ಥಾನಕ್ಕೆ ಸಂಬಂಧಿಸಿದ ವರದಿಯಲ್ಲಿ ಸರ್ವೆ ಇಲಾಖೆಯಿಂದ 34 ಸರ್ವೆ ನಂಬರಿನ ನಕ್ಷೆ ಮಾತ್ರ ತಯಾರಿಸಲಾಗಿತ್ತು. ಅವುಗಳಲ್ಲಿರುವ ಮರಮುಟ್ಟುಗಳನ್ನು ಗುರುತಿಸಿರುವುದಿಲ್ಲ ಮರಮುಟ್ಟುಗಳನ್ನು ಗುರುತಿಸಿ ಲೆಕ್ಕ ನಿರ್ವಹಿಸಲಾಗುವುದೆಂದು ತಿಳಿಸಿರುತ್ತಾರೆ. ಹಾಗೂ ಖಡ್ಗ ರಾವಣನ ಗುಡಿಯ ಜೀರ್ಣೋದ್ಧಾರ ಸಂದರ್ಭದಲ್ಲಿ ದೇವಸ್ಥಾನದ ಜಾಗೆಯಲ್ಲಿರುವ ಮರಗಳ ಬಳಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಉಳಿದ ಕಚ್ಚತುಂಡುಗಳನ್ನು

ಕಾರ್ಯನಿರ್ವಾಹಕ ಅಧಿಕಾರಿಯವರ ಬಂಗಲೆಯಲ್ಲಿ ಇಡಲಾಗಿದೆ ಎಂದು ತಿಳಿಸಿರುತ್ತಾರೆ. 2012ಕ್ಕೂ ಮೊದಲು ಖಡ್ಗ ರಾವಣ ಗುಡಿ ನಿರ್ಮಾಣದ ಜೀರ್ಣೋದ್ಧಾರಕ್ಕೆ ಸಂಬಂಧಪಟ್ಟಂತೆ 8 ಸಾಗುವಾನಿ ಹಾಗೂ 2 ಹೆಬ್ಬಲಸು ಮರಗಳನ್ನು ಕಡಿಯಲಾಗಿದ್ದು ಇಂಜಿನಿಯರ್ ಅವರ ಅಂದಾಜು ಪಟ್ಟಿಯಂತೆ 170 ಸಿಎಫ್‌ಟಿ ಮರವನ್ನು ನಿರ್ಮಾಣಕ್ಕಾಗಿ ಉಪಯೋಗಿಸಿದ್ದು, 11.50 ಸಿಎಫ್‌ಟಿ ದೇವಾಲಯದ ವಶದಲ್ಲಿರುತ್ತದೆಂದು ತಿಳಿಸಿರುತ್ತಾರೆ. ಎದುರುದಾರರು 4 ರಿಂದ 6, 8 ಇವರು ತಮ್ಮ ಆಕ್ಷೇಪಣೆ ಸಲ್ಲಿಸಿ ದಿ. 7.1.2013 ರಂದು ದೇವಸ್ಥಾನದ ವ್ಯವಸ್ಥಾಪಕ ಸಮಿತಿ ಸದಸ್ಯರು ಮರವನ್ನು ಕಡಿದಿದ್ದು, ಸದರಿ ಮರಗಳನ್ನು ದೇವಸ್ಥಾನದ ನಿರ್ಮಾಣಕ್ಕಾಗಿ ಬಳಕೆ ಮಾಡಿರುವುದು ಕಂಡುಬರುತ್ತದೆ. ಆದರೆ ಹೆಬ್ಬರಿ ವಲಯ ಅರಣ್ಯಾಧಿಕಾರಿಗಳು ಉಡುಪಿ ತಾಲ್ಲೂಕು ಪೆರ್ಡೂರು ಗ್ರಾಮದ ಪದ್ಮನಾಭ ದೇವಸ್ಥಾನದ 1 ಹೆಬ್ಬಲಸು ಮರವನ್ನು ಅಕ್ರಮವಾಗಿ ಕಡಿದು ಸಿಗಿದು ಸೈಜುಗಳಾಗಿ ಪರಿವರ್ತಿಸಿ ದಾಸ್ತಾನು ಇರಿಸಿದ ಆರೋಪಕ್ಕಾಗಿ ವ್ಯವಸ್ಥಾಪನ ಸಮಿತಿ ಸದಸ್ಯರಾದ ಸದಾಶಿವ ಶೆಟ್ಟಿ ಇವರ ಮೇಲೆ ಅರಣ್ಯ ಇಲಾಖೆ ಮೊಖದ್ದಮೆ ಸಂಖ್ಯೆ. 84/2013-14ನ್ನು ದಾಖಲಿಸಿದ್ದು ಸದರಿ ಮೊಖದ್ದಮೆಗೆ ದಂಡವಾಗಿ ರೂ. 32,237/-ಗಳನ್ನು ದಂಡವಾಗಿ ಪಾವತಿಸಿರುತ್ತಾರೆ.ಮರದ ದಿಮ್ಮಿಗಳು, ಮರಗಳು ಇವುಗಳ ಕುರಿತು ಸೂಕ್ತವಾಗಿ ನಿರ್ವಹಣೆ ಮಾಡುವಂತೆ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಕ್ತ ನಿರ್ದೇಶನ ನೀಡಿದ್ದು ದೇವಾಲಯದ ಸುಪರ್ದಿಯಲ್ಲಿರುವ ಹಲವು ಮರಗಳು ಪೋಲಾಗಿರುತ್ತದೆ ಎಂದು ಅರ್ಜಿದಾರರು ಸದರಿ ಸಂದರ್ಭದಲ್ಲಿ ದೂರನ್ನು ಸಲ್ಲಿಸಿದ್ದರು. ದಿ. 7.2.2015ರಂತೆ ಶ್ರೀಮತಿ ಪೂರ್ಣಿಮ ಅವರಿಗೆ ಸಹಾಯಕ ಆಯುಕ್ತರು ದೇವಾಲಯದ ಮರಮುಟ್ಟುಗಳ ಬಗ್ಗೆ ಮತ್ತು ಅರಣ್ಯ ಅಧಿಕಾರಿಗಳು ಪ್ರಕರಣದ ದಾಖಲಿಸಿದ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಅಕ್ರಮವಾಗಿ ಮರ ಕಡಿದ ಮಾಹಿತಿಯನ್ನು ನೀಡಿಲ್ಲವಾದಕಾರಣ ಮತ್ತು ಮರ ಕಡಿಯಲು ಅರಣ್ಯ ಇಲಾಖೆ ಪರವಾನಿಗೆ ಪಡೆಯದ ಕಾರಣ ಪ್ರಕರಣ ದಾಖಲಿಸಿದೆ ಎಂದು ತಿಳಿಸಿರುತ್ತಾರೆ. ಇದರೊಂದಿಗೆ ಸರ್ವೆ ಕಾರ್ಯದ ಬಾಬ್ತು ಒತ್ತುವರಿ ವಿವರಗಳನ್ನು ನಿರ್ವಹಿಸುವಂತೆ ಮತ್ತು ದಾಖಲೆ ಸಲ್ಲಿಸುವಂತೆ ಹೇಳಿದ್ದು ಜಿಪಿಎಸ್ ಅಳತೆ ವಿಧಾನದ ಆಧಾರದಲ್ಲಿ

ನಿರ್ವಹಿಸಿರುವುದಿಲ್ಲವಾದ್ದರಿಂದ ಪ್ರಸ್ತುತ ಜಿಪಿಎಸ್ ಅಳತೆ ಮಾಡಲು ರಹವಿರುವುದಿಲ್ಲವೆಂದ ತಿಳಿಸಿರುತ್ತಾರೆ. ಸರ್ವೆ ಮಾಡಲು ಬಾಕಿ ಉಳಿದ ಸರ್ವೆ ಮಾಡಿದ ಬಗ್ಗೆ ಉಪನಿರ್ದೇಶಕರೊಂದಿಗೆ ಚರ್ಚಿಸಲಾಗಿದ್ದು ದೇವಸ್ಥಾನ ಮಂಡಳಿಯಿಂದ ಸರ್ವೆಗೆ ತಗಲುವ ಶುಲ್ಕವನ್ನು ಭರಿಸುವಂತೆ ಸೂಚಿಸಿದ್ದು 4.7.2018ರಂದು ದೇವಸ್ಥಾನದಿಂದ ಪಾವತಿಸಿವುದಾಗಿ ತಿಳಿಸಿರುತ್ತಾರೆ. ನಂತರ ಸರ್ವೆ ಇಲಾಖೆಯಿಂದ ಸರ್ವೆ ಕಾರ್ಯ ನಡೆಯಬೇಕಾದಾಗ್ಯೂ ದೇವಸ್ಥಾನದ ಸುಪರ್ದಿಯಲ್ಲಿರುವ ಜಮೀನಿನಲ್ಲಿರುವ ಮರಮುಟ್ಟುಗಳ ಕುರಿತು ಕಡತದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ವಿಷಯವನ್ನು ಫಿರ್ಯಾದಿದಾರರಿಗೆ ಸಹಾ ತಿಳಿಸಲಾಗಿದೆ ಎಂದು ಹೇಳಿರುತ್ತಾರೆ. ಅದರೊಂದಿಗೆ ಮರ ಗಿಡ ಇರುವ ಬಗ್ಗೆ ಫೋಟೋಗಳನ್ನು ಹಾಗೂ ದಾಖಲೆಯನ್ನು ಸಲ್ಲಿಸಿದ್ದು ಉಳಿದ ಜಾಗದ ಕುರಿತು ಸರ್ವೆ ನಿರ್ವಹಿಸಲಾಗಿದೆ ಎಂದು ತಿಳಿಸಿರುತ್ತಾರೆ.

16) ಸದರಿ ಪ್ರಕರಣದಲ್ಲಿ 1ನೇ ಎದುರುದಾರರು 2015-16ನೇ ಸಾಲಿನಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಸಹಾಯಕ ಆಯುಕ್ತರಾಗಿ ಕೆಲಸ ನಿರ್ವಹಿಸಿದ್ದು, ಇವರು ಅರ್ಜಿದಾರರು ಮರಗಳನ್ನು ಕಡಿದ ಬಗ್ಗೆ ಹಾಗೂ ವಿಲೇವಾರಿ ಮಾಡಿದ ಬಗ್ಗೆ ಆಕ್ಷೇಪಣೆಯಲ್ಲಿ ಉಲ್ಲೇಖಿಸಿರುವುದರಿಂದ ಕರ್ತವ್ಯದಲ್ಲಿ ಲೋಪ ಎಸಗಿರುವುದು ಸ್ಪಷ್ಟವಾಗುತ್ತಿದ್ದು, ದಿ. 11.12.2015ರವರೆಗೆ ರಿಜಿಸ್ಟರನ್ನು ತೆರೆದು ದಾಖಲಿಸುವಂತೆ ನಿರ್ದೇಶನ ನೀಡಿದ್ದು, ಆದರೆ ಅಕ್ರಮವಾಗಿ ಮರ ಕಡಿದ ಕುರಿತು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ, ಸದರಿಯವರ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

17) 2ನೇ ಎದುರುದಾರರು ದಿ. 5.12.2014 ರಿಂದ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದು, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ ಮರಗಳನ್ನು ಕಡಿತ ಮಾಡಿದ ಮತ್ತು ಉಳಿದ ಆಸ್ತಿಗಳ ಸಂಬಂಧ ಸರ್ವೆಗಳನ್ನು ಮಾಡಿಸದೆ ಇರುವುದು ಕಂಡುಬಂದಿದ್ದು, ಅಕ್ರಮವಾಗಿ ಮರವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡ ಬಗ್ಗೆ ಮತ್ತು ಅಳತೆ ಮಾಡಲಾದ 36 ಆಸ್ತಿಗಳನ್ನು

ಹೊರತುಪಡಿಸಿ, ಇತರೆ ಆಸ್ತಿಗಳನ್ನು ಅಳತೆ ಮಾಡಿಸಲು (ಮೋಜಣಿ) ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ತಮ್ಮ ಅಧಿಕಾರ ಅವಧಿಯಲ್ಲಿ ಕರ್ತವ್ಯಲೋಪ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

18) 3ನೇ ಎದುರುದಾರರು ದಿ. 4.11.2016ರ ಅವಧಿಯಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ್ದು, ದೇವಸ್ಥಾನದ ಜಾಗವನ್ನು ಜಿಪಿಎಸ್ ಮೂಲಕ ಸರ್ವೆ ಮಾಡಿಸಿ ಮರಗಳನ್ನು ಕಡೆದ ಬಗ್ಗೆ ದೇವಾಳ ಸಮಿತಿಗೆ ಮತ್ತು ದೇವಾಲಯ ಕಾರ್ಯನಿರ್ವಾಹಕ ಅಧಿಕಾರಿಗೆ ದಿ. 4.11.2016ರಂದು ಸೂಕ್ತ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿದ್ದು ಇರುತ್ತದೆ. ಆದರೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ.

19) 6ನೇ ಎದುರುದಾರರು ದಿ. 14.3.2013ರಿಂದ 31.8.2013ರವರೆಗೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದು, **ದಿ. 31.8.2013 ರಂದು ನಿವೃತ್ತಿಯಾಗಿದ್ದು ಕಂಡುಬರುತ್ತದೆ.**

20) 7ನೇ ಎದುರುದಾರರು ದಿ. 4.1.2013ರಿಂದ 3.2.2013ರವರೆಗೆ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು ಸದರಿ ಅಧಿಕಾರಿಯ ಅವಧಿಯಲ್ಲಿ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ಸದರಿಯವರ ಆಕ್ಷೇಪಣೆ ಒಪ್ಪಲು ಸಾಧ್ಯವಿಲ್ಲ.

21) 4,5 ಹಾಗೂ 8ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಯನ್ನು ಒಪ್ಪಬಹುದಾಗಿರುತ್ತದೆ. ಮತ್ತು ಇವರ ವಿರುದ್ಧ ಯಾವುದೇ ಕರ್ತವ್ಯಲೋಪ ಕಂಡುಬರುವುದಿಲ್ಲ.

22) ಸದರಿ ಅಂಶಗಳ ಮೇಲಿನ ಆಧಾರದಿಂದ ಎದುರುದಾರ 1 ಇವರು ತಮ್ಮ ಅಧಿಕಾರವಧಿಯಲ್ಲಿ ದೂರುದಾರರು ಕೋರಿರುವಂತೆ ದೇವಸ್ಥಾನದ ಆಸ್ತಿ ರಿಜಿಸ್ಟರ್‌ಗಳನ್ನು ತೆರೆದು ಎರಡು ತಿಂಗಳ ಅವಧಿಯೊಳಗೆ ಎಲ್ಲಾ ಮಾಹಿರಿಯನ್ನು ದಾಖಲಿಸುವಂತೆ, ದಾಖಲಿಸಿಕೊಂಡ ನಂತರ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ ಎಂದು ನಮೂದಿಸಿರುವುದರಿಂದ ಮತ್ತು ಎದುರುದಾರ 2 ಇವರು ಸದರಿ ಸಮಯದಲ್ಲಿ ಎದುರುದಾರ 1 ಇವರ ನಿರ್ದೇಶನದಂತೆ ಎದುರುದಾರ 2 ಇವರು ಕ್ರಮ ಕೈಗೊಂಡಿರುವುದಿಲ್ಲ. ಆದರೆ ತಮ್ಮ ಆಕ್ಷೇಪಣೆಯಲ್ಲಿ ಸಾವಿರಾರು ಎಕರೆ ಜಮೀನು ದೇವಸ್ಥಾನದ ಹೆಸರಿನಲ್ಲಿದ್ದು, ಇಲ್ಲಿಯವರೆಗೂ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ ದೇವಾಲಯದ ಜಾಗದಲ್ಲಿರುವ ಮರಮುಟ್ಟುಗಳನ್ನು ಗುರುತಿಸಿ ಅವುಗಳ ಲೆಕ್ಕಕ್ಕೆ ನಿರ್ವಹಿಸಲಾಗುವುದು ಎಂದು ಮಾತ್ರ ಹೇಳಿದ್ದು, ಅದರೆ ನಿರ್ವಹಿಸಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 2 ಮತ್ತು 7ನೇ ಎದುರುದಾರರಾದ ಶ್ರೀಮತಿ ಪೂರ್ಣಿಮಾ ಹಾಗೂ ಶ್ರೀ ಗಣೇಶ್‌ರಾವ್ ತಮ್ಮ ಕರ್ತವ್ಯದಲ್ಲಿ ಲೋಪ ಎಸಗಿರುವುದು ಮತ್ತು ದೇವಸ್ಥಾನದ ಜಮೀನಿನ ಮರಮುಟ್ಟುಗಳು ಅಕ್ರಮವಾಗಿ ಕಡಿದು ಮುಜರಾಯಿ ಇಲಾಖೆಗೆ ಸೇರಿದ ಜಮೀನುಗಳಲ್ಲಿಯ ಮರಮುಟ್ಟುಗಳು ಪೋಲಾಗಲು ಕಾರಣ ಕರ್ತರಾಗಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ. 3 ಮತ್ತು 6 ನೇ ಎದುರುದಾರರು ನಿವೃತ್ತಿ ಯಾಗಿರುವುದರಿಂದ ಅವರ ವಿರುದ್ಧ ಕೆ.ಸಿ.ಎಸ್.ಆರ್. ಕಾಯ್ದೆ 214 ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ.

**23)** ಆದ್ದರಿಂದ, 2 ಮತ್ತು 7ನೇ ಎದುರುದಾರರು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಎದುರುದಾರರಾದ (1) ಶ್ರೀಮತಿ ಪೂರ್ಣಿಮ, ಕಾರ್ಯನಿರ್ವಾಹಣಾಧಿಕಾರಿ, ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನ, ಪೆರ್ಡೂರು, ಉಡುಪಿ ಜಿಲ್ಲೆ ಹಾಗೂ (2) ಶ್ರೀ ಗಣೇಶ ರಾವ್ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಅನಂತಪದ್ಮನಾಭ ದೇವಸ್ಥಾನ ಪೆರ್ಡೂರು ಉಡುಪಿ,

ಪ್ರಸ್ತುತ ಪರಿವೀಕ್ಷಕರು ಹಿಂದೂ ಧಾರ್ಮಿಕ ದತ್ತಿ ಇಲಾಖೆ ಉಡುಪಿ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

24) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

16-12-20

[ನ್ಯಾಯಮೂರ್ತಿ ಬಿ.ಎಸ್. ಪಾಟೀಲ್]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.